**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ**

**ನ್ಯಾಯಾಲಯ ಆಳಂದ**

ಸಿ.ಸಿ. ನಂಬರ 459/2018 ಸಿ.ಡಬ್ಲೂ.**1** ಪಿ.ಡಬ್ಲೂ. **1**

ಹೆಸರು ಃ ಶರಣಬಸಪ್ಪ

ಗಂಡ ಃ ಶಾಂತಪ್ಪ

ವಯಸ್ಸು ಃ 34 ವರ್ಷ

ಉದ್ಯೋಗ ಃ ಒಕ್ಕಲುತನ

ವಾಸಸ್ಥಳ ಃ ಧುತ್ತರಗಾಂವ

ದಿನಾಂಕಃ 20-12.2025

---

ಸತ್ಯ ಪ್ರತಿಜ್ಞೆಯ ಮೇರೆಗೆ

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ಅವರಿಂದ ಃ

ಆರೋಪಿತರ ಪರಿಚಯ ಇರುತ್ತದೆ. ಚಾಸಾ 2 ರಿಂದ 6 ರವರ ಪರಿಚಯ ಇರುತ್ತದೆ.

ಸಮಾರು 5-6 ವರ್ಷಗಳ ಹಿಂದೆ ಆರೋಪಿತರು ನೀರಿನ ಸಲುವಾಗಿ ಜಗಳ ಮಾಡಿ, ನನಗೆ ಮತ್ತು ನನ್ನ ತಂದೆಯವರಿಗೆ ದಬ್ಬಾಳಿಕೆ ಮಾಡಿ ಅಂಜಿಕೆ ಹಾಕಿರುತ್ತಾರೆ. ನಾವು ನೀರನ್ನು ಬಿಡುತ್ತೇವೆ ನೀನು ಏನು ಮಾಡಿಕೊಳ್ಳುತ್ತೀಯಾ ಮಾಡಿಕೋ ಎಂದು ಹೇಳಿ ನೀರನ್ನು ಹಾಗೆಯೇ ಬಿಟ್ಟಿರುತ್ತಾರೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ.

ಸಾಕ್ಷಿಯು ದೂರಿನ ಮೇಲೆ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)

ಪಾಟೀ ಸವಾಲುಃ ಸ.ಸ.ಅ. ವಕೀಲರಿಂದ

ದಿಃ 09.06.2018 ರಂದು ಬೆಳಿಗ್ಗೆ 9.00 ಗಂಟೆಗೆ ನಾನು ನಮ್ಮ ಹೊಲಕ್ಕೆ ಹೋಗಿದ್ದೇ ಎಂದರೆ ಸರಿ. ಆರೋಪಿತರು ನೀರು ಬಿಟ್ಟ ಬಗ್ಗೆ ಚಾಸ-4 ರಿಂದ 6ರವರ ಸಮಕ್ಷಮ ಪಂಚಾಯ್ತಿ ಮಾಡಿರುತ್ತೇವೆ ಎಂದರೆ ಸರಿ ಪಂಚಾಯ್ತಿ ಆದರೂ ಸಹಿತ ಯಾವುದೇ ಪ್ರಯೋಜನ ಆಗಿಲ್ಲ ಎಂದರೆ ಸರಿ. ದಿಃ 18.08.2018 ರಂದು ನಾನು ಪೋಲಿಸರಿಗೆ ಘಟನಾ ಸ್ಥಳವನ್ನು ತೋರಿಸಿರುತ್ತೇನೆ ಎಂದರೆ ಸರಿ ಪೋಲಿಸರು ಅಲ್ಲಿ ಚಾಸ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ಎಸ್ ಎಸ್ ಸಿ ವಕೀಲರಿಂದಃ

ಆರೋಪಿತರೆಲ್ಲರೂ ಲಾಡ್ ಚಿಂಚೋಳ್ಳಿ ಯವರು ಎಂದರೆ ಸಾಕ್ಷಿಯು ಒಂದಿಬ್ಬರೂ ತಾಂಡದವರು ಇರುತ್ತಾರೆ ಎಂದು ನುಡಿಯುತ್ತಾರೆ ನಾನು ಧುತ್ತರಗಾಂವ ಗ್ರಾಮದವನ್ನು ಎಂದರೆ ಸರಿ. ತೊಗರಿ ಬೇಳೆಯು ಮೀರುಗು ಮಳೆ(ಜೂನ್ ತಿಂಗಳು) ಆದ ನಂತರ ಭಿತ್ತನೆ ಮಾಡುತ್ತಾರೆ ಎಂದರೆ ಸರಿ. ಸದರಿ ತೊಗರಿಯು 6 ತಿಂಗಳಿಗೆ ಬೆಳೆಯುತ್ತದೆ ಎಂದರೆ ಸರಿ. ಧುತ್ತರಗಾಂವದಲ್ಲಿ ನನ್ನ ಜಮೀನಿನ ಸರ್ವೆ ನಂ. 38 ಇದ್ದು ಒಟ್ಟು 9 ಎಕರೆ 30 ಗುಂಟೆ ಇರುತ್ತದೆ. ಆರೋಪಿತರ ಜಮೀನಿನ ಸರ್ವೆ ನಂಬರಗಳು ಲಾಡ್ ಚಿಂಚೋಳ್ಳಿ ಗ್ರಾಮದಲ್ಲಿ ಬರುತ್ತದೆ ಎಂದರೆ ಸರಿ. ನನ್ನ ಜಮೀನು ಮತ್ತೆ ಲಾಡ್ ಚಿಂಚೋಳ್ಳಿ ಗ್ರಾಮದ ಜಮೀನಿಗೆ ಸೀಮೆ ರೇಖೆ ಇರುತ್ತದೆ ಎಂದರೆ ಸರಿ. ಸೀಮೆಯಲ್ಲಿ ಇರುವ ಕಾರಣ ಧುತ್ತರಗಾಂವ ಗ್ರಾಮದ ಸ್ವಲ್ಪ ಜಮೀನು ಮತ್ತು ಲಾಡ್ ಚಿಂಚೋಳ್ಳಿ ಗ್ರಾಮದ ಸ್ವಲ್ಪ ಜಮೀನು ಬೀಳು ಇರುತ್ತದೆ ಎಂದರೆ ಸರಿ. ನನ್ನ ಜಮೀನಿನ ಇಳಿಜಾರು ಪಶ್ಚಿಮ ದಿಕ್ಕಿಗೆ ಇರುತ್ತದೆ. ನನ್ನ ಜಮೀನಿನ ಪೂರ್ವ ದಿಕ್ಕಿಗೆ ಲಾಡ್ ಚಿಂಚೋಳ್ಳಿ ಸೀಮೆ ಜಾಗ ಇದ್ದು ಅದಕ್ಕೆ ಹೊಂದಿಕೊಂಡು ಯಾವ ಆರೋಪಿತರ ಜಮೀನುಗಳು ಇರುತ್ತವೆ ಎಂದರೆ ಸಾಕ್ಷಿಯು ಆರೋಪಿ ಸಂಖ್ಯೆ 1, 2,5,6,8,9 ಮತ್ತು ಉಳಿದವರ ಹೆಸರುಗಳು ನನಗೆ ನೆನಪಿರುವುದಿಲ್ಲ. ಸದರಿ ಆರೋಪಿತರ ಜಮೀನುಗಳ ಸರ್ವೆ ನಂಬರಗಳು ನನಗೆ ಹೇಳಲು ಬರುವುದಿಲ್ಲ. ಎಲ್ಲಾ ಆರೋಪಿತರ ಜಮೀನುಗಳು ಸೀಮೆಯನ್ನು ದಾಟಿದ ನಂತರ ನನ್ನ ಜಮೀನಿಗೆ ಹತ್ತಿಕೊಂಡು ಬರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಆರೋಪಿತರ ಜಮೀನುಗಳು

ನಮ್ಮ ಜಮೀನಿಗೆ ಹೊಂದಿಕೊಂಡು ಇರುವ ಬಗ್ಗೆ ಪೋಲಿಸರಿಗೆ ನಾನು ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಮನ್ಯವಾಗಿ ಇಳಿಜಾರು ಇದ್ದಕಡೆ ನೀರು ಹರಿದು ಹೋಗುತ್ತದೆ ಎಂದರೆ ಸರಿ. ನನ್ನ ಆರೋಪಿತರ ಜಮೀನಿನ ಮದ್ಯದಲ್ಲಿ ಚಿಕ್ಕ ನಾಲೆ ಇರುತ್ತದೆ ಎಂದರೆ ಸಾಕ್ಷಿಯು ಬಂದಾರಿ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿತರ ಜಮೀನುಗಳ ಇಳಿಜಾರು ಧುತ್ತರಗಾಂವ ಸೀಮೆಯ ಕಡೆ ಇರುತ್ತದೆ ಎಂದರೆ ಸರಿ.

<u>ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದು ಆಲಿಸಿ ನೀಡಲಾಯಿತು.</u>

ಓ.ಹೇ.ಕೆ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ. ಎಫ್.ಸಿ ಆಳಂದ